# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

## ಸ್ಪೆಷಲ್ ಕೇಸ್ ನಂ. 142/2022

**ದೋ.ಸಾ. : 08 ಫ್ರಾ.ಸಾ. : 04**

| | | |
|---|---|---|
| ಸಾಕ್ಷಿಯ ಹೆಸರು | : | ನಿರ್ಮಲಾ ಶಿವರಾಮ ಬೋವಿವಡ್ಡರ |
| ತಂದೆಯ ಹೆಸರು | : | ಶಿವರಾಮ ಬೋವಿವಡ್ಡರ |
| ವಯಸ್ಸು | : | 25 ವರ್ಷ |
| ಕೆಲಸ | : | ಮನೆಗೆಲಸ |
| ವಾಸ | : | ಆಶ್ರಯ ಕಾಲೋನಿ, ದಾಂಡೇಲಿ |

**ದಿನಾಂಕಃ 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1. ಮೃತೆ ಸುಶೀಲಾ ನನ್ನ ದೊಡ್ಡಮ್ಮ. ಚಾಸಾ-1 ಶೋಭಾ ಮತ್ತು ಚಾಸಾ-6 ಆನಂದ ರವರು ನನ್ನ ದೊಡ್ಡಮ್ಮನ ಮಕ್ಕಳು. ಮೃತೆ ಸುಶೀಲಾ ಪರಿಶಿಷ್ಟ ಜಾತಿಯ ಬೋವಿವಡ್ಡರ ಜನಾಂಗಕ್ಕೆ ಸೇರಿದವರಾಗಿರುತ್ತಾರೆ. ಚಾಸಾ-7 ಮಂಜುನಾಥ ನನ್ನ ಚಿಕ್ಕಪ್ಪನ ಮಗ. ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ನನಗೆ ಗೊತ್ತು ಹಾಗೂ ಈ ದಿನ ಗೈರು ಹಾಜರಾದ 2 ನೇ ಆರೋಪಿ ಸಹ ನನಗೆ ಗೊತ್ತು. (2 ನೇ ಆರೋಪಿ ಪರ ವಕೀಲರು ಆತನನ್ನು ಗುರುತಿಸಲು ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ) 1 ನೇ ಆರೋಪಿ ಹಿಂದೂ ರಡ್ಡಿ ಜನಾಂಗಕ್ಕೆ ಸೇರಿದವನಾಗಿದ್ದು, 2 ನೇ ಆರೋಪಿಯು ಪರಿಶಿಷ್ಟ ಜಾತಿಯ ಚಮಗಾರ ಜಾತಿಗೆ ಸೇರಿದವನಾಗಿರುತ್ತಾನೆ. ಮೃತೆ ಸುಶೀಲಾ ರವರು ಪರಿಶಿಷ್ಟ ಜಾತಿಯ ಬೋವಿವಡ್ಡರ ಜನಾಂಗಕ್ಕೆ ಸೇರಿದವರು ಎಂದು ಆರೋಪಿಗಳಿಗೆ ಗೊತ್ತಿತ್ತು.

2. ಚಾಸಾ-1 ಶೋಭಾ ಮದುವೆಯಾಗಿ ಗಂಡನ ಮನೆಯಾದ ಯಲ್ಲಾಪುರದಲ್ಲಿ ವಾಸವಾಗಿದ್ದರು. ಚಾಸಾ-6 ಆನಂದ ದಾಂಡೇಲಿಯ ಗಾಂವಟಾಣದಲ್ಲಿ ವಾಸವಾಗಿದ್ದನು. ನನ್ನ ದೊಡ್ಡಮ್ಮ ಮೃತೆ ಸುಶೀಲಾ ರವರ ಮನೆ ದಾಂಡೇಲಿಯ ಆಶ್ರಯ ಕಾಲೋನಿಯಲ್ಲಿರುತ್ತದೆ. ಅವರು ಜೋಯಿಡಾ ತಾಲೂಕಿನ ಪಟೊಳಿಯಲ್ಲಿರುವ ನೇಚರ್ ನೆಸ್ಟ್ ಹೊಂ ಸ್ಟೇ ನಲ್ಲಿ

ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದರು. ನನ್ನ ದೊಡ್ಡಮ್ಮ ನೇಚರ್ ನೆಸ್ಟ್ ಹೊಂ ಸ್ಟೇ ನಲ್ಲಿ ಈ ಘಟನೆ ನಡೆಯುವ ಮೊದಲು ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದರು ಹಾಗೂ ಅವರು ಅಲ್ಲಿಯೇ ಉಳಿಯುತ್ತಿದ್ದರು, ಆದರೆ ಅವರು ಆಗಾಗ್ಗೆ ಮನೆಗೆ ಬಂದು-ಹೋಗುತ್ತಿದ್ದರು.

3. ನಾವು ಆಶ್ರಯ ಕಾಲೋನಿಯ ಗಾಂಧಿ ನಗರದ ಮೊದಲನೇ ಗಲ್ಲಿಯಲ್ಲಿ ವಾಸವಾಗಿರುತ್ತೇವೆ, ಸುಶೀಲಾ ರವರು ಎರಡನೇ ಗಲ್ಲಿಯಲ್ಲಿ ವಾಸವಾಗಿದ್ದರು ಹಾಗೂ ಈ ಪ್ರಕರಣದ 2 ನೇ ಆರೋಪಿ ಸಹ ಸುಶೀಲಾ ರವರು ವಾಸವಾಗಿದ್ದ ಗಲ್ಲಿಯಲ್ಲಿಯೇ ವಾಸವಾಗಿದ್ದನು, ಆದ್ದರಿಂದ ಆತ ನನಗೆ ಗೊತ್ತು. 1 ನೇ ಆರೋಪಿಯನ್ನು ನಾನು ನೇಚರ್ ನೆಸ್ಟ್ ಹೊಂ ಸ್ಟೇ ಗೆ ಹೋದಾಗ ನೋಡಿರುತ್ತೇನೆ. ಆತ ಅಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ. 2 ನೇ ಆರೋಪಿ ಸದರಿ ಹೊಂ ಸ್ಟೇ ನಲ್ಲಿ ಹೆಲ್ಪರ್ ಆಗಿ ಕೆಲಸ ಮಾಡುತ್ತಿದ್ದ.

4. ದಿಃ 26-08-2022 ರಂದು ನಾನು ಮನೆಯಲ್ಲಿದ್ದಾಗ, ಮದ್ಯಾಹ್ನ 01-45 ಗಂಟೆ ಸುಮಾರಿಗೆ ಚಾಸಾ-1 ರವರು ನನಗೆ ಕರೆ ಮಾಡಿ, ದಾಂಡೇಲಿಯ ಸರಕಾರಿ ಆಸ್ಪತ್ರೆಗೆ ಬಳಿ ಬರುವಂತೆ ತಿಳಿಸಿರುತ್ತಾರೆ. ಅದರಂತೆ ನಾನು ಆಸ್ಪತ್ರೆಯ ಬಳಿ ಹೋದಾಗ, ಅಲ್ಲಿ ನನ್ನ ದೊಡ್ಡಮ್ಮಳಾದ ಸುಶೀಲಾ ರವರು ಮೃತಪಟ್ಟಿರುವ ಬಗ್ಗೆ ತಿಳಿಯಿತು. ನಂತರ ನಾನು ಚಾಸಾ-1 ರವರ ಬಳಿ ವಿಚಾರಿಸಿದಾಗ, ಆಕೆ ನನ್ನ ಬಳಿ "ದಿಃ25-08-2022 ರಂದು ಬೆಳಿಗ್ಗೆ 08-30 ಗಂಟೆಗೆ ನಾನು ನನ್ನ ತಾಯಿಗೆ ಕರೆ ಮಾಡಿ, ಮಾತನಾಡಿರುತ್ತೇನೆ. ಆ ನಂತರ ನಾನು ಮದ್ಯಾಹ್ನ ನನ್ನ ತಾಯಿಗೆ ಕರೆ ಮಾಡಿದಾಗ, ಕರೆ ತಾಗಿರುವುದಿಲ್ಲ, ಆ ನಂತರ ನಾನು ರಾತ್ರಿ 08-45 ಗಂಟೆ ಸುಮಾರಿಗೆ ನನ್ನ ತಾಯಿಗೆ ಕರೆ ಮಾಡಿದಾಗ, ಆಗಲೂ ಸಹ ಆಕೆಗೆ ಕರೆ ತಾಗಿರುವುದಿಲ್ಲ. ಮರುದಿನ ಬೆಳಿಗ್ಗೆ 2 ನೇ ಆರೋಪಿ ನನಗೆ ಕರೆ ಮಾಡಿ, ನಿನ್ನ ಅಮ್ಮ ಮಲಗಿದ್ದಲ್ಲೇ ತೀರಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾನೆ, ಆ ನಂತರ ಹೃದಯಘಾತವಾಗಿ ತೀರಿಕೊಂಡಿರುತ್ತಾರೆ, ಆದ್ದರಿಂದ ಆಕೆಯ ಶವವನ್ನು ಆಶ್ರಯ ಕಾಲೋನಿಯಲ್ಲಿರುವ ಮನೆಗೆ ತರುತ್ತೇವೆ ಎಂದು ಹೇಳಿರುತ್ತಾನೆ, ನಂತರ ನಾನು ಚಾಸಾ-7 ಮಂಜುನಾಥ ರವರಿಗೆ ಕರೆ ಮಾಡಿದಾಗ, ಆತ ದಾಂಡೇಲಿಯ ಆಸ್ಪತ್ರೆಯ ಹತ್ತಿರ ಬರುವಂತೆ ತಿಳಿಸಿರುತ್ತಾನೆ, ಅದರಂತೆ ನಾನು ಯಲ್ಲಾಪುರದಿಂದ ಹೊರಟು ದಾಂಡೇಲಿಯ ಆಸ್ಪತ್ರೆಗೆ ಬಂದು, ನನ್ನ ತಾಯಿಯನ್ನು ನೋಡಿದಾಗ, ಕುತ್ತಿಗೆಯ ಬಳಿ ಬಟ್ಟೆಯಿಂದ ಬಿಗಿದ ಕಪ್ಪಾದ ಗುರುತು ಇತ್ತು ಹಾಗೂ ಕಾಲಿನ ಹಿಮ್ಮಡಿಯ ಬಳಿ ಮೊಳೆ ಚುಚ್ಚಿದ ರೀತಿಯಲ್ಲಿ ಗಾಯವಾಗಿ ರಕ್ತ ಬಂದಿತ್ತು, ನಂತರ ನಾನು

ಅಲ್ಲಿಯೇ ಇದ್ದ ಚಾಸಾ-7 ರವರ ಬಳಿ ವಿಚಾರಿಸಿದಾಗ, 2 ನೇ ಆರೋಪಿಯು ನಿನ್ನ ತಾಯಿಯ ಶವವನ್ನು ಅಂಬ್ಯುಲೆನ್ಸನಲ್ಲಿ ಮನೆಯ ಹತ್ತಿರ ತಂದು, ಆಕೆಗೆ ಹೃದಯಘಾತವಾಗಿದೆ ಎಂದು ತಿಳಿಸಿರುತ್ತಾನೆ, ಆದರೆ ನಿನ್ನ ತಾಯಿಯ ಕುತ್ತಿಗೆ ಬಳಿ ಬಟ್ಟೆಯಿಂದ ಬಿಗಿದ ಕಪ್ಪಾದ ಗುರುತು ಇತ್ತು ಹಾಗೂ ಕಾಲಿನ ಹಿಮ್ಮಡಿಯ ಬಳಿ ಮೊಳೆ ಚುಚ್ಚಿದ ರೀತಿಯಲ್ಲಿ ಗಾಯವಾಗಿ ರಕ್ತ ಬಂದಿತ್ತು, ಆದ್ದರಿಂದ ನನಗೆ ಸಂಶಯ ಬಂದು, ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇನೆ ಎಂದು ಹೇಳಿದ, ಆ ನಂತರ ನಾನು ಸಹ ಶವವನ್ನು ನೋಡಿದಾಗ, ನನಗೂ ಸಹ ನನ್ನ ತಾಯಿಯ ಸಾವಿನ ಬಗ್ಗೆ ಸಂಶಯ ಬಂದಿರುತ್ತದೆ" ಎಂದು ಹೇಳಿರುತ್ತಾಳೆ.

5. ಆ ನಂತರ ನಾನೂ ಸಹ ನನ್ನ ದೊಡ್ಡಮ್ಮನ ಶವವನ್ನು ನೋಡಿದ್ದು, ಆಕೆಯ ಕುತ್ತಿಗೆಯ ಬಳಿ ಬಟ್ಟೆಯಿಂದ ಬಿಗಿದ ಕಪ್ಪಾದ ಗುರುತು ಇತ್ತು ಹಾಗೂ ಕಾಲಿನ ಹಿಮ್ಮಡಿಯ ಬಳಿ ಮೊಳೆ ಚುಚ್ಚಿದ ರೀತಿಯಲ್ಲಿ ಗಾಯವಾಗಿ ರಕ್ತ ಬಂದಿರುವುದು ಕಂಡುಬಂದಿರುತ್ತದೆ. ಆದ್ದರಿಂದ ನಮಗೆ ಸುಶೀಲಾ ರವರ ಸಾವಿನ ಬಗ್ಗೆ ಅನುಮಾನ ಬಂದಿದ್ದರಿಂದ ನಾನು ಹಾಗೂ ಚಾಸಾ-1 ರವರು ದಾಂಡೇಲಿಯ ಗ್ರಾಮೀಣ ಪೊಲೀಸ್ ಠಾಣೆಗೆ ಹೋಗಿ, ದೂರನ್ನು ನೀಡಿರುತ್ತೇವೆ. ಠಾಣೆಯಲ್ಲಿ ಚಾಸಾ-1 ರವರು ಹೇಳಿದಂತೆ ದೂರನ್ನು ನಾನೇ ಬರೆದು ಚಾಸಾ-1 ರವರಿಗೆ ನೀಡಿರುತ್ತೇನೆ. ಸದರಿ ದೂರಿಗೆ ಚಾಸಾ-1 ರವರು ಸಹಿ ಮಾಡಿ ದೂರನ್ನು ನೀಡಿರುತ್ತಾರೆ. ದೂರನ್ನು ಬರೆದ ಬಗ್ಗೆ ನಾನೂ ಸಹ ದೂರಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಯು ತಾನು ಬರೆದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

6. ದಿಃ 27-08-2022 ರಂದು ನಾವು ಪೊಲೀಸ್ ಠಾಣೆಗೆ ಹೋದಾಗ, ಅಲ್ಲಿ ಪೊಲೀಸರು 1 ಮತ್ತು 2 ನೇ ಆರೋಪಿತರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿದ್ದು, "ದಿಃ 25-08-2022 ರ ರಾತ್ರಿ 01-45 ಗಂಟೆ ಸಮಯದಲ್ಲಿ ಸುಶೀಲಾ ರವರು ನೇಚರ್ ನೆಸ್ಟ್ ಹೊಂ ಸ್ಟೇ ನ ರೂಮ್ ನಲ್ಲಿ ಮಲಗಿದ್ದಾಗ, 1 ನೇ ಆರೋಪಿಯು ಸುಶೀಲಾಳೊಂದಿಗೆ ಬಲತ್ಕಾರ ಮಾಡಲು ಪ್ರಯತ್ನಿಸಿದ್ದು, ಆಗ ಸುಶೀಲಾಳು ಅದನ್ನು ನಿರಾಕರಿಸಿ, ಈ ವಿಷಯವನ್ನು ಹೊಂ ಸ್ಟೇ ಮಾಲೀಕರಿಗೆ ತಿಳಿಸುವುದಾಗಿ, ಹೇಳಿದ್ದರಿಂದ, ಆತ ತನ್ನ ಕೆಲಸ ಹೋಗುತ್ತದೆ ಎಂದು ಹೆದರಿ, ಸೀರೆಯಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡಿರುತ್ತಾನೆ, ಕೊಲೆ ಮಾಡಲು ಬಿಗಿದಾಗ

ಆಕೆಯ ಕಾಲುಗಳು ಗೋಡೆಯ ಬಳಿ ಇದ್ದ ಮೊಳೆಗೆ ತಾಗಿ ರಕ್ತ ಬಂದಿರುತ್ತದೆ ಹಾಗೂ 2 ನೇ ಆರೋಪಿಯು ಅದೇ ಹೊಂ ಸ್ಟೇ ನಲ್ಲಿ ಕೆಲಸ ಮಾಡುತ್ತಿದ್ದು, 1 ನೇ ಆರೋಪಿಯ ಸುಶೀಲಾಳನ್ನು ಕೊಲೆ ಮಾಡಿದ ವಿಷಯ ಗೊತ್ತಿದ್ದರೂ ಸಹ ಆಕೆಗೆ ಹೃದಯಘಾತವಾಗಿ ಮೃತಪಟ್ಟಿರುತ್ತಾಳೆ ಎಂದು ಸುಳ್ಳು ಹೇಳಿರುತ್ತಾನೆ" ಎಂದು ಹೇಳಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರು ನಮ್ಮ ಸಂಬಂಧಿಕರ ಬಳಿ ಸುಶೀಲಾಳಿಗೆ ಹೃದಯಘಾತವಾಗಿದೆ ಎಂದು ಸುಳ್ಳು ಹೇಳಿರುವ ವಿಷಯನ್ನು ತಿಳಿದು, ನಾನು ಪೊಲೀಸರ ಮುಂದೆ ಮತ್ತೊಂದು ಮರು ಹೇಳಿಕೆಯನ್ನು ನೀಡಿರುತ್ತೇನೆ. ನಿಪಿ-2 ಪೋಟೋದಲ್ಲಿ ಮೃತೆ ಸುಶೀಲಾಳ ಶವವನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಆ ದಿನ ನಾನು ಪೊಲೀಸ್ ಠಾಣೆಯಲ್ಲಿ ನೋಡಿದ ಆರೋಪಿಗಳ ಪೈಕಿ ಈಗ 1 ನೇ ಆರೋಪಿ ನ್ಯಾಯಾಲಯದಲ್ಲಿರುತ್ತಾನೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಎಲ್.ಎ.ಡಿ.ಸಿ ರವರಿಂದ**

7. ನಾನು 10 ನೇ ತರಗತಿ ನಂತರದ ಎನ್.ಟಿ.ಡಿ.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಮ್ಮ ತಾಯಿಗೆ ಒಬ್ಬರು ಅಣ್ಣ, ಒಬ್ಬರು ತಮ್ಮ ಹಾಗೂ ಒಬ್ಬರು ತಂಗಿ ಇರುತ್ತಾರೆ ಹಾಗೂ ಅವರೆಲ್ಲರೂ ಬೇರೆ-ಬೇರೆ ಊರುಗಳಲ್ಲಿ ವಾಸವಾಗಿರುತ್ತಾರೆ. ಮೃತೆ ಸುಶೀಲಾ ರವರು ನನ್ನ ದೂರದ ಸಂಬಂಧಿ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ಆಶ್ರಯ ಕಾಲೋನಿಯಲ್ಲಿ ಸುಶೀಲಾರವರದು ಸ್ವಂತ ಮನೆ ಇದ್ದು, ಅವಳು ತುಂಬಾ ವರ್ಷಗಳಿಂದ ಅಲ್ಲಿಯೇ ವಾಸವಾಗಿದ್ದರು. ಸುಶೀಲಾ ಹೆಸರಿನಲ್ಲಿ ಪಡಿತರ ಚೀಟಿ ಹಾಗೂ ಆಧಾರ ಕಾರ್ಡ್ ಇದ್ದವು. ಸುಶೀಲಾಳ ಗಂಡನ ಹೆಸರು ದುರ್ಗಪ್ಪ ಇದ್ದು, ಆತ ಮೂಲತಃ ಬೆಳಗಾವಿಯವನಾಗಿದ್ದು, ಆತ ಆಕೆಯನ್ನು ಬಿಟ್ಟು ಹೋಗಿದ್ದ. ನನಗೆ ಸುಶೀಲಾರವರೊಂದಿಗೆ ಹೆಚ್ಚಿನ ಒಡನಾಟ ಇರಲಿಲ್ಲ, ಆದರೆ ಆಕೆ ಅವರ ತಾಯಿಯ ಮನೆಗೆ ಬಂದಾಗ ನಾವು ಮಾತನಾಡಿಸುತ್ತಿದ್ದೆವು.

8. ನಮ್ಮ ಮನೆಯಿಂದ ಸುಶೀಲಾಳ ರವರ ಮನೆ 250 ಮೀಟರ್ ದೂರದಲ್ಲಿ ಇರುತ್ತದೆ. ಮೃತೆ ಸುಶೀಲಾ ರವರು ಮನೆಗೆಲಸ ಮಾಡುತ್ತಿದ್ದರು ಎಂದರೆ ಸರಿ. ನಾನು ನೇಚರ್ ನೆಸ್ಟ್ ಹೊಂ ಸ್ಟೇ ನಲ್ಲಿ ಕೆಲಸ ಮಾಡುವುದಿಲ್ಲ. ಅಲ್ಲಿ ಅನೇಕ ಜನರು ಕೆಲಸ ಮಾಡುತ್ತಾರೆ ಎಂದರೆ ಸರಿ. ಸದರಿ ಹೊಂ ಸ್ಟೇ ನಲ್ಲಿ ಯಾವುದೇ ಮನೆಗಳು ಇರುವುದಿಲ್ಲ. ಅಲ್ಲಿ ಸುಶೀಲಾ ವಾಸವಾಗಿದ್ದ ರೂಮ್

ಸ್ಲ್ಯಾಬ್ ಹಾಕಿದ ರೂಮ್ ಆಗಿತ್ತು. ಹೊಂ ಸ್ಟೇ ನ ಗೇಟ್ ನಿಂದ ಸುಶೀಲಾ ವಾಸವಾಗಿದ್ದ ರೂಮ್ ಎಷ್ಟು ದೂರದಲ್ಲಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಅಲ್ಲಿಗೆ ಹೋದಾಗ, 4-5 ಜನರು ಇದ್ದರು, ಅವರನ್ನು ನೋಡಿದರೆ ಗುರುತಿಸುತ್ತೇನೆ, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ.

9. ನಾನು ಚಾಸಾ-1 ರವರೊಂದಿಗೆ ನೇಚರ್ ನೆಸ್ಟ್ ಹೊಂ ಸ್ಟೇ ಹೋದಾಗ, ಅಲ್ಲಿ 1 ನೇ ಆರೋಪಿಯನ್ನು ನೋಡಿರುತ್ತೇನೆ, ಆದರೆ ಆತನೊಂದಿಗೆ ಮಾತನಾಡಿರುವುದಿಲ್ಲ ಹಾಗೂ ಆತನ ವೈಯಕ್ತಿಕ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಸುಶೀಲಾಳಿಗೆ ಕೆಲಸ ಮಾಡುವ ಜಾಗದಲ್ಲಿ ತೊಂದರೆ ಆಗುತ್ತದೆ ಎಂದು, ಸುಶೀಲಾ ಆಗಲೀ ಅಥವಾ ಚಾಸಾ-1 ರವರಾಗಲೀ ನನ್ನ ಬಳಿ ಹೇಳಿರುವುದಿಲ್ಲ. ನಮ್ಮ ಮನೆಯಿಂದ ಚಾಸಾ-7 ಮಂಜುನಾಥ ರವರ ಮನೆ 200 ಮೀಟರ್ ದೂರದಲ್ಲಿರುತ್ತದೆ ಹಾಗೂ ಅವರ ಮನೆ ಸುಶೀಲಾಳ ರವರ ಮನೆ ಮುಂದೆ ಇರುತ್ತದೆ. ಚಾಸಾ-7 ರವರೂ ಸಹ ನನ್ನ ದೂರದ ಸಂಬಂಧಿ, ಅಂದರೆ ನನ್ನ ದೊಡ್ಡಪ್ಪನ ಮಗ. ಸುಶೀಲಾಳ ರವರ ಮನೆಯ ಅಕ್ಕ-ಪಕ್ಕದಲ್ಲಿ ಸುಮಾರು 14 ಮನೆಗಳಿರುತ್ತವೆ.

10. ನಮ್ಮ ಓಣಿಯಲ್ಲಿ ಯಾವುದಾದರೂ ಅಂಬ್ಯುಲೇನ್ಸ್ ಬಂದರೆ ಗೊತ್ತಾಗುತ್ತದೆ. ಚಾಸಾ-1 ರವರು ನನಗೆ ಕರೆ ಮಾಡುವ ವರೆಗೆ  ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ನಿಪಿ-1 ದೂರಿನಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ವೈಯಕ್ತಿವಾಗಿ ಗೊತ್ತಿಲ್ಲ ಎಂದರೆ ಸರಿ. 1 ನೇ ಆರೋಪಿಯು ಸೀರೆಯಿಂದ ಸುಶೀಲಾಳ ಕುತ್ತಿಗೆ ಬಿಗಿದು ಕೊಲೆ ಮಾಡಿರುತ್ತಾನೆ ಹಾಗೂ ಕುತ್ತಿಗೆ ಬಳಿ ಕಪ್ಪಾದ ಗುರುತು ಇತ್ತು ಎಂದು ನಾನು ಪೊಲೀಸರ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ-1 ರವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿದಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತೆ ಸುಶೀಲಾ ನನ್ನ ಸಂಬಂಧಿಕಳಲ್ಲ ಎಂದರೆ ಸರಿಯಲ್ಲ. ಆಕೆ ಪರಿಶಿಷ್ಟ ಜಾತಿಯ ಬೋವಿವಡ್ಡರ ಜನಾಂಗಕ್ಕೆ ಸೇರಿದವಳಲ್ಲ ಎಂದರೆ ಸರಿಯಲ್ಲ. ನಾನು ಎಂದಿಗೂ ನೇಚರ್ ನೆಸ್ಟ್ ಹೊಂ ಸ್ಟೇಗೆ ಹೋಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಮೃತೆ ಸುಶೀಲಾಳ ಜಾತಿಯ ಬಗ್ಗೆ

ಗೊತ್ತಿರುತ್ತದೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿರುವ ಸಂಗತಿಗಳನ್ನು ಚಾಸಾ–1 ರವರು ಹೇಳಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ವಿ.ಎ.ಟಿ ವಕೀಲರಿಂದ**

11. ನಾನು ಬರೆದ ದೂರು 4–5 ಪುಟಗಳಲ್ಲಿತ್ತು. ಎಲ್ಲಾ ಪುಟಗಳ ಮೇಲೆ ನನ್ನ ಸಹಿ ಇರುವುದಿಲ್ಲ. ಅದೇ ರೀತಿ ಚಾಸಾ–1 ರವರೂ ಸಹ ಎಷ್ಟು ಪುಟಗಳಲ್ಲಿ ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಗಳಲ್ಲಿ ಚಾಸಾ–1 ರವರು ಯಾವ ನಂಬರ್ ನಿಂದ ನನ್ನ ಯಾವ ನಂಬರ್ ಗೆ ಕರೆ ಮಾಡಿದ್ದರು ಎಂದು ಹೇಳಿರುವುದಿಲ್ಲ. ದೂರು ಬರೆಯುವ ಸಮಯದಲ್ಲಿ ಘಟನಾ ಸ್ಥಳಕ್ಕೆ ನಾನು ಭೇಟಿ ನೀಡಿಲ್ಲ. ಘಟನೆಯಾದ ಬಗ್ಗೆ ನನಗೆ ಸ್ವತಃ ಮಾಹಿತಿ ಇರುವುದಿಲ್ಲ. ಒಂದು ವೇಳೆ ನಾನು ದಾಂಡೇಲಿಯ ಆಸ್ಪತ್ರೆಗೆ ಹೋಗಿ ಶವವನ್ನು ನೋಡಿದ್ದರೆ ನಿಪಿ–2 ಪೋಟೋದಲ್ಲಿ ನಾನು ಇರುತ್ತಿದ್ದೆ ಎಂದರೆ ಸರಿಯಲ್ಲ. ನಾನು ನೀಡಿದ ಹೇಳಿಕೆ ಹಾಗೂ ಮರು ಹೇಳಿಕೆಯಲ್ಲಿ ಸ್ವತಃ ಆಸ್ಪತ್ರೆಗೆ ಹೋಗಿ ಶವವನ್ನು ನೋಡಿರುತ್ತೇನೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಶವವನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಶವವನ್ನು ನೋಡಿದ ಬಗ್ಗೆ ನನ್ನ ಹೇಳಿಕೆಯಲ್ಲಿ ನಾನು ಹೇಳಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಘಟನೆಯ ಬಗ್ಗೆ ಹೇಳಿರುವ ವಿಚಾರಗಳು ನನ್ನ ಮುಂದೆ ಜರುಗಿಲ್ಲ ಎಂದರೆ ಸರಿ.

12. ಸಾಮಾನ್ಯವಾಗಿ ಯಾರಾದರೂ ಘಟನೆಯನ್ನು ನೋಡಿದ್ದರೆ, ಅದನ್ನು ಪೊಲೀಸರ ಮುಂದೆ ಹೇಳುತ್ತಾರೆ ಎಂದರೆ ಸರಿ. ನನ್ನ ಮುಂದೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿ. ಪೊಲೀಸರು ಹಾಗೂ ಚಾಸಾ–1 ರವರು ಹೇಳಿದ ಮೇರೆಗೆ, ಈ ದಿನ ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ–ತಮ್ಮಂದಿರಿಂದ ಘಟನೆಯ ಬಗ್ಗೆ ತಿಳಿದುಕೊಂಡಿಲ್ಲ. ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿರುವ ಸಂಗತಿಗಳನ್ನು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರು ನನಗೆ ಪರಿಚಯ ಇರುವ ಕಾರಣ, ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಶ್ರಯ ಕಾಲೋನಿಯಲ್ಲಿರುವ 18–20 ಮನೆಗಳನ್ನು ಬಿಟ್ಟು ನಾನು ಒಬ್ಬಳೇ ಚಾಸಾ–1 ರವರಿಗೆ ಸಹಾಯ ಮಾಡುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ